

# ಹೆರಳ ಮೋಹಕ ಜಾಲ

ಅಭಿಲಾಷ ಬಿ.ಸಿ.

**ಮಾನಿನಿಯ ಸೌಂದರ್ಯಕ್ಕೆ ಮುಕುಟದಂತಿರುವ ಮುಡಿಯನ್ನು ಸಿಂಗರಿಸಿಕೊಳ್ಳುವುದೇ ಸವಾಲು. ಅದರಲ್ಲೂ ಸಾಲು ಸಾಲು ಹಬ್ಬ, ಸಮಾರಂಭಗಳ ಸಂದರ್ಭದಲ್ಲಿ ಮಹಿಳೆಯರಿಗೆ ಹೇರ್ ಸ್ಟೈಲ್‌ನ ಚಿಂತೆ ಮತ್ತಷ್ಟು ಹೆಚ್ಚು.**

ಸುರುಳಿ ಹೆರಳಿನ ಚೆಲುವೆಗೆ ನೀಳ ಕೇಶರಾಶಿಯ ಒಲವು. ಕಡುಕಪ್ಪು ಕೂದಲಿನ ಶ್ವೇತ ಸುಂದರಿಗೆ ತಿಳಿಗೆಂಪು ಮುಡಿಯ ಮೋಹ. ಕಂದು ಕೂದಲಿನ ಕೃಷ್ಣಸುಂದರಿಗೆ ಕಪ್ಪು ಹೆರಳೇ ಮೆಚ್ಚು. ಮುಗಿಲು ನೋಡಿದರೂ ಹೆಗಲು ಮುಟ್ಟದಷ್ಟು ಉದ್ದದ ಕೂದಲಿನ ಲಲನೆಗೆ ಮಂಡಿಯುದ್ದದ ಕೂದಲಿನ ಆಸೆ. ಹೊನಲು ಹೊನಲಾಗಿ ಹರಡಿಕೊಂಡ ಕೆಂಪು ಸುಂದರಿಗೆ ಪ್ರತಿ ಕೂದಲಿಗೂ ಒಂದೊಂದು ರಂಗು ಹಾಕಿಕೊಳ್ಳುವ ತವಕ. ಮತ್ತೊಬ್ಬಳಿಗೆ ಮುಂಗುರಳ ಮೋಹ... ಹೀಗೆ ಬಗೆ ಬಗೆಯಾಗಿ ಕೂದಲನ್ನು ಶೃಂಗರಿಸುವುದು ಹೆಂಗಳೆಯರ ಇಷ್ಟದ ಜೊತೆಗೆ ತುಸು ಕಷ್ಟದ ಕೆಲಸವು ಹೌದು.

ಮಾನಿನಿಯ ಸೌಂದರ್ಯಕ್ಕೆ ಮುಕುಟದಂತಿರುವ ಮುಡಿಯನ್ನು ಸಿಂಗರಿಸಿಕೊಳ್ಳುವುದೇ ಸವಾಲು. ಅದರಲ್ಲೂ ಶ್ರಾವಣ ಹೊತ್ತು ತರುವ ಸಾಲು, ಸಾಲು ಹಬ್ಬ, ಸಮಾರಂಭಗಳಿಗೆ ಸಿದ್ಧವಾಗುವ ಮಹಿಳೆಯರಿಗೆ ಹೇರ್ ಸ್ಟೈಲ್‌ನದ್ದೇ ಚಿಂತೆ.

‘ಕೇಶ ವಿನ್ಯಾಸಕ್ಕೆ ತುಸು ಆಸಕ್ತಿ, ಸ್ವಲ್ಪ ಅರಿವು ಇದ್ದರೂ ನಮ್ಮಿಷ್ಟದಂತೆ ಮುಡಿ ಶೃಂಗರಿಸಿಕೊಳ್ಳಬಹುದು. ದೇಹ ವರ್ಣ ಹಾಗೂ ಮುಖದ ಆಕಾರಕ್ಕೆ ತಕ್ಕುದಾದ ಕೇಶವಿನ್ಯಾಸ ಆಯ್ಕೆ ಮಾಡಿಕೊಳ್ಳುವುದು ಜಾಣ ನಡೆ’ ಎನ್ನುತ್ತಾರೆ ಕೇಶ ಮತ್ತು ಪ್ರಸಾಧನ ಕಲಾವಿದೆ ನಂದಿನ ಪಟೇಲ್.



ನಂದಿನಿ ಪಟೇಲ್

ನನ್ನ ಕೂದಲು ತೆಳುವಾಗಿದೆ, ಗಿಡ್ಡವಾಗಿದೆ ಯಾವ ವಿನ್ಯಾಸಕ್ಕೂ ಹೊಂದಿಕೆಯಾಗುವುದಿಲ್ಲ ಎಂದು ಗೊಣಗುವವರಿಗಾಗಿಯೇ ನಂದಿನಿ ಪಟೇಲ್ ಒಂದಿಷ್ಟು ಸಲಹೆಗಳನ್ನು ನೀಡಿದ್ದಾರೆ.

## ಹೇರ್ ಟ್ರೆಂಡ್‌ನ ಅರಿವಿರಲಿ

ಸದಾ ವೈವಿಧ್ಯದಲೆಯ ಮೇಲೆ ತೇಲುವ ಫ್ಯಾಷನ್ ಲೋಕದಲ್ಲಿ ದಿನಕ್ಕೊಂದು ಟ್ರೆಂಡ್ ಇದ್ದರೇನೆ ಚೆಂದ. ಟ್ರೆಂಡ್‌ಗೆ ಸರಿಯಾಗಿ ಕೇಶ ವಿನ್ಯಾಸ ಮಾಡಿಕೊಂಡರೆ ಮನಸ್ಸಿಗೆ ಮುದ ನೀಡುತ್ತದೆ. ನನ್ನ ಕೇಶವಿನ್ಯಾಸ ಸುಂದರವಾಗಿದೆ ಅಥವಾ ಟ್ರೆಂಡಿಯಾಗಿದೆ ಎನ್ನುವ ವಿಶ್ವಾಸ ನಮ್ಮಲ್ಲಿದ್ದರೆ ಕೀಳರಿಮೆ ಇರುವುದಿಲ್ಲ.

## ಫ್ರಂಟ್ ಬಂಪ್

ಇದು ಹಳೆಯ ವಿನ್ಯಾಸವಾಗಿದ್ದರೂ ಇಂದಿಗೂ ಜನಪ್ರಿಯ. ಫ್ರಂಟ್ ಬಂಪ್ ಮಾಡಿ ಕೂದಲನ್ನು ಫ್ರೀ ಬಿಡಬಹುದು ಅಥವಾ ಜುಟ್ಟನ್ನು ಹಾಕಿಕೊಳ್ಳಬಹುದು. ದುಂಡಾಕಾರದ ಮುಖದವರಿಗೆ ಈ ವಿನ್ಯಾಸ ಹೆಚ್ಚು ಸೂಕ್ತ.

## ಪೋನಿ ಟೇಲ್

ಕೃಶವಾದ ಕೂದಲಿರುವವರು ಪೋನಿ ಟೇಲ್ ಹಾಕಿಕೊಳ್ಳಬಹುದು. ಈ ವಿನ್ಯಾಸದಲ್ಲಿ ಕೂದಲು ದಪ್ಪವಾಗಿ, ಆಕರ್ಷಕವಾಗಿ ಕಾಣುತ್ತದೆ. ನಿತ್ಯ ಕಚೇರಿಗೆ ಹೋಗುವವರಿಗೆ, ಪ್ರಯಾಣ ಮಾಡುವವರಿಗೆ ಈ ವಿನ್ಯಾಸ ಸಮಂಜಸ.

## ಮೆಸ್ಸಿ ಬನ್

ಇತ್ತೀಚೆಗೆ ಹೆಚ್ಚಿನವರು ಇಷ್ಟಪಡುವ ವಿನ್ಯಾಸವಿದು. ಎಲ್ಲ ಬಗೆಯ ಕೇಶರಾಶಿಯವರಿಗೂ ಇದು ಹೊಂದಿಕೆಯಾಗುತ್ತದೆ. ದುಂಡಾಕಾರದ ಮುಖದವರಿಗೆ ಹೇಳಿಮಾಡಿಸಿದ ವಿನ್ಯಾಸ.